(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು walk out ಮಾಡುತ್ತೇವೆ. ನಾವು walk out ಅಲ್ಲ, boycott ಮಾಡುತ್ತೇವೆ. ನಮ್ಮ boycott ನಲ್ಲಿಯೇ ನೀವು ಮಾಡಿಕೊಂಡು ಹೋಗಿ, ಅದು ಏನು ಮಾಡಿಕೊಂಡು ಹೋಗುತ್ತೀರೋ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ bill pass ಮಾಡಿಕೊಂಡು ಹೋಗಿ, ಅದು ಏನು ಮಾಡಿಕೊಳ್ಳುತ್ತೀರೋ ಮಾಡಿಕೊಂಡು ಹೋಗಿ. ನನಗೆ ಚರ್ಚೆ ಮಾಡಲು ಅವಕಾಶ ಕೊಡಲಿಲ್ಲವೆಂದರೆ boycott ಮಾಡುತ್ತೇವೆ. ಇದು Government? ಇದನ್ನು democracy ಎಂದು ಕರೆಯುತ್ತಾರೆಯೇ? BAC meeting ಕರೆಯಿರಿ ಸ್ವಾಮಿ. ಈಗ BAC meeting ಕರೆಯಿರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಹೋಗುತ್ತೀರೋ, ಇಲ್ಲವೋ? ಅದನ್ನು ಹೇಳಿಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Rule 69 ನಲ್ಲಿ ಚರ್ಚೆಗೆ ನೋಟಿಸ್ ಕೊಟ್ಟಿದ್ದೇವೆ. Upper Krishna ಬಗ್ಗೆ ಚರ್ಚೆ ಮಾಡಿ ಅದಕ್ಕೆ ಉತ್ತರ ಕೊಡಬೇಕಾಗಿದೆ. ಚಾಮುಂಡಿ ಬೆಟ್ಟದಲ್ಲಿದ್ದ ಸರ್ಕಾರಿ ಭೂಮಿಯನ್ನು ಕಬಳಿಸಿದ ಬಗ್ಗೆ ಚರ್ಚೆ ಮಾಡಲು ನೋಟಿಸ್ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲಿ ಕೊಟ್ಟಿದ್ದೀರಿ, ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಕೊಟ್ಟಾಗಿದೆ. ನಿಮಗೆ ಗೊತ್ತಿಲ್ಲ. ನಾವು ನಿನ್ನೆ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವೆಲ್ಲ ನಿಮಗೆ ಆಸಕ್ತಿ ಇಲ್ಲ. ರಾಜಕಾರಣ ಮಾಡುವುದಕ್ಕೆ ಅಷ್ಟೆ ಇರುವುದು. ಚಾಮುಂಡಿ ಬೆಟ್ಟದಲ್ಲಿ ಎರಡು ಸಾವಿರ ಎಕರೆ ಜಾಗ ಹೋಗಿದೆ ಎಂದು ನಾವು ಹೇಳಬೇಕಾದರೆ ಇವರು ಮಲಗಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Adjournment motion ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅದನ್ನು ಪ್ರಸ್ತಾಪವೇ ಮಾಡಲಿಲ್ಲವಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : Adjournment motion ಪ್ರಸ್ತಾಪ ಮಾಡಿದಿರಾ?

ಶ್ರೀ ಸಿದ್ದರಾಮಯ್ಯ : ಹೌದು.

ಶ್ರೀ ಕೆ.ಎಸ್. ಈಶ್ವರಪ್ಪ : ಯಾವಾಗ? ಎಲ್ಲಿ ಮಾಡಿದಿರಿ?

ಶ್ರೀ ಸಿದ್ದರಾಮಯ್ಯ : ನಿನ್ನೆ ಮಾಡಿದೆವು. ಆಗ ನೀವು ಇರಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಬೇಕಾದರೆ, Speaker ರವರಿಗೆ ಕೇಳಿ.

ಅಧ್ಯಕ್ಷರು : ನಿನ್ನೆ ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಪ್ರಸ್ತಾಪ ಮಾಡಿರುವುದು ನಿಮಗೆ ಗೊತ್ತಿಲ್ಲ, ನೀವು ಸರಿಯಾಗಿ Assembly ಗೆ ಬರುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಶ್ರೀ ವೆಂಕಟರಾವ್ ನಾಡಗೌಡ ಮತ್ತು ಶ್ರೀ ಎ.ಎಸ್. ನಡಹಳ್ಳಿಯವರು ಉತ್ತರ ಕರ್ನಾಟಕದ ನೀರಾವರಿ ಕುರಿತಂತೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಸದನದ ಬಾವಿಗೆ ಬಂದರು)

(ಗೊಂದಲ)

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದಿಂದ ಹೊರ ನಡೆದರು)

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಸದನ ಕರೆದಿರುವ ಉದ್ದೇಶವೇನು ಎಂದು ಈ ಸರ್ಕಾರ ತಿಳಿಸಬೇಕಾಗುತ್ತದೆ. ಬೆಳಗಾವಿಯಲ್ಲಿ ಸದನ ಕರೆದಿರುವ ಉದ್ದೇಶವೇನೆಂದರೆ, ಉತ್ತರ ಕರ್ನಾಟಕ ಭಾಗದ ಜನತೆಯ ಕಳೆದ 50 ವರ್ಷಗಳಲ್ಲಿ ಆಗದಿರುವಂಥ ಕೆಲಸ ಕಾರ್ಯಗಳ ದೃಷ್ಟಿಯಲ್ಲಿ ಇವತ್ತು ಉತ್ತರ ಕರ್ನಾಟಕದಲ್ಲಿ ಸದನ ಮಾಡ ಬೇಕೆಂದು ಕುಮಾರಸ್ವಾಮಿಯವರು ಇದ್ದಾಗ ಮಾಡಿದರು. ಆದರೆ, ನೀವು ಕಳೆದ 5 ದಿವಸಗಳಿಂದ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯೇ ಇಲ್ಲ. Krishna Basin ಮೇಲೆ 1964 ರಿಂದ 48 ವರ್ಷಗಳು ಏನಾಗಿದೆ ಎಂದು ನಿಮಗೆ ಗೊತ್ತಿದೆ. ಅದಕ್ಕೆ ನೀವು priority ಕೊಡದೆ ಯಾವುದೋ 4 Bill ಗಳನ್ನು pass ಮಾಡಿಕೊಂಡು ನೀವು ವ್ಯವಸ್ಥೆ ಮಾಡಬೇಕೆನ್ನುವುದಾದರೆ ಇದರ ಅರ್ಥ ಏನು? ಇವತ್ತು ಸುಮಾರು 157 ತಾಲ್ಲೂಕುಗಳಲ್ಲಿ ಬರಗಾಲವಿದೆ. ಕುಡಿಯುವ ನೀರಿನ ಸಲುವಾಗಿ ಚರ್ಚೆ ಮಾಡುವುದಕ್ಕೆ ನಾವು ಒಂದು ವಾರದಿಂದ ಅವಕಾಶ ಕೇಳುತ್ತಿದ್ದೇವೆ. ಇದೆಲ್ಲ ಬಿಟ್ಟು ನೀವು ಯಾವುದೋ Bill pass ಮಾಡಿಕೊಳ್ಳುವುದು, ಯಾವುದೋ ಒಂದು ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುವುದಕ್ಕೆ ಹೋಗಬಾರದು. Election ದೃಷ್ಟಿ ಇಟ್ಟುಕೊಂಡು ದಯವಿಟ್ಟು ಮಾಡಬಾರದು. ಏಕೆಂದರೆ, Bill pass ಮಾಡುವಾಗ ನೀವು ವಿರೋಧ ಪಕ್ಷದವರನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವುದು ಒಳ್ಳೆಯದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸರ್ಕಾರ ಉತ್ತರ ಕರ್ನಾಟಕದ ವಿಷಯ ಕುರಿತು ಒಂದು ವಾರದಿಂದ ಚರ್ಚೆ ಮಾಡಬೇಡಿ ಎಂದು ನಾವು

ಹೇಳಿದ್ದೇವೆಯೇ? ಕುಡಿಯುವ ನೀರಿನ ಕುರಿತು ಚರ್ಚೆ ಮಾಡುವುದು ಬೇಡ ಎಂದು ಹೇಳಿದ್ದೇವೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ರಾಜಕಾರಣ ಮಾಡುತ್ತಿರುವುದು ನೀವಾ? ನಾವಾ?

ಶ್ರೀ ಹೆಚ್.ಡಿ. ರೇವಣ್ಣ : ನಾವು ರಾಜಕಾರಣ ಮಾಡಿದ್ದಲ್ಲ, ನೀವು ಈಗ ಈ Bill ನ್ನು ತಂದು ಕೂಡಲೆ pass ಮಾಡುವ ಅವಶ್ಯಕತೆ ಇತ್ತೇ?

ಶ್ರೀ ಕೆ.ಎಸ್. ಈಶ್ವರಪ್ಪ : ಯಾವುದೋ ಒಂದು ವರ್ಗವನ್ನು ತೃಪ್ತಿಪಡಿಸಬೇಕೆನ್ನುವವರು ನಾವಲ್ಲ. ಮುಸಲ್ಮಾನರನ್ನು ತೃಪ್ತಿಪಡಿಸಬೇಕೆಂದು ಆತುರದಿಂದ ಇರುವವರು ನೀವು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಈ ಮಾತನ್ನು ಹೇಳಬೇಡಿ. ಉತ್ತರ ಕರ್ನಾಟಕದ ಬಗ್ಗೆ ಮಾತನಾಡಿ ಎಂದು ನಾವು ಪ್ರಾರಂಭದ ದಿನದಿಂದಲೇ ಹೇಳುತ್ತಿದ್ದೇವೆ. ಈಗ ಕೊನೆಯ ದಿವಸ ಉತ್ತರ ಕರ್ನಾಟಕದ ನೆಪ ಹೇಳಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲ, ಇದು ಯಾವಸೀಮೆರಾಜಕಾರಣ? ಇದು ರಾಜಕಾರಣವಲ್ಲ. ಕಾಂಗ್ರೆಸ್ ಇರಬಹುದು, ಜೆಡಿ(ಎಸ್) ಇರಬಹುದು. ಉತ್ತರ ಕರ್ನಾಟಕದ ಬಗ್ಗೆ ನೆಪ ಹೇಳಿಕೊಂಡು ಹೊರಟಿದ್ದೀರಿ. ಇಷ್ಟು ದಿವಸ ಏಕೆ ಉತ್ತರ ಕರ್ನಾಟಕದ ಬಗ್ಗೆ ನಿಮಗೆ ನೆನಪಾಗಲಿಲ್ಲ? ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಬೇಡಿ ಎಂದು ನಾವು ಹೇಳಿದ್ದೇವೆಯೇ? ಉತ್ತರ ಕರ್ನಾಟಕದ ಬಗ್ಗೆ ಮಾತನಾಡಿ ಎಂದು ನಾವು ಸರ್ಕಾರದ ಕಡೆಯಿಂದ ವಿರೋಧ ಪಕ್ಷದವರಿಗೆ ಪ್ರತಿ ದಿವಸ ಹೇಳಿದ್ದೇವೆ. ಆಗ ನಿಮಗೆ ನೆನಪಾಗಲಿಲ್ಲ. ಹೋಗುವ ದಿನ ನೆನಪು ಮಾಡಿಕೊಂಡಿದ್ದೀರಿ. ಚುನಾವಣೆ ಹತ್ತಿರ ಬರುತ್ತಿದೆ, ಉತ್ತರ ಕರ್ನಾಟಕದ ಜನತೆಗೆ ಹೇಗೆ ಮುಖ ತೋರಿಸಬೇಕು, ಅದಕ್ಕೋಸ್ಕರ ಸಭಾತ್ಯಾಗ ಮಾಡುವುದಕ್ಕೆ ಹೋಗಿ boycott ಮಾಡುತ್ತೇವೆಂದು, ಇದು ಯಾವ ಸೀಮೆಯ ರಾಜಕಾರಣ?

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಚರ್ಚೆ ಮಾಡುವುದಿಲ್ಲವೆಂದು ಯಾವಾಗ ಹೇಳಿದ್ದು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನೀವು ಚರ್ಚೆಯಲ್ಲಿ ಭಾಗವಹಿಸುತ್ತೀರೋ, ಹೊರಗೆ ಹೋಗುತ್ತಿರೋ? ಏನಾದರೊಂದು ತೀರ್ಮಾನ ಮಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಮಗೆ ಚರ್ಚೆ ಬೇಡ. ನಿಮಗೆ ಕಲಾಪ ನಡೆಯುವುದು ಬೇಡ. ಜನರ ಹಿತ ಬೇಡ. ಏನೂ ಬೇಡ. ಸುಮ್ಮನೆ ರಾಜಕಾರಣ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಹಜ್ ಮತ್ತು ವಕ್ಫ್ ಸಚಿವರು) : ಉತ್ತರ ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳನ್ನು ಜಾರಿಗೆ ತಂದಿರುವಂಥದ್ದು ಇದೆ. ಈ ಐತಿಹಾಸಿಕ ಅಧಿವೇಶನ ನಡೆಸುತ್ತಿದೆ. ಇದನ್ನು ಕಾಂಗ್ರೆಸ್ ಮತ್ತು ಜೆ.ಡಿ.(ಎಸ್)ನವರಿಗೆ ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : Agenda ಪ್ರಕಾರ ಹೋಗೋಣ.

(ಗೊಂದಲ)

ಅಧ್ಯಕ್ಷರು : please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಉಪ ಮುಖ್ಯಮಂತ್ರಿಯವರಲ್ಲಿ ನಾನು ಮನವಿ ಮಾಡುವುದಿಷ್ಟೇ. ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ. ಎಲ್ಲಾ ವಿರೋಧ ಪಕ್ಷದವರನ್ನು ಕರೆಸಿ, ಉತ್ತರ

ಕರ್ನಾಟಕದ ಕೃಷ್ಣಾ ನದಿಯ ಬಗ್ಗೆ ಇರಬಹುದು, ಕುಡಿಯುವ ನೀರಿನ ಬಗ್ಗೆ ಇರಬಹುದು, ಅದರ ಬಗ್ಗೆ ಚರ್ಚೆಯಾಗಬೇಕು. ನಾವೇನೂ CAG ವರದಿಯನ್ನು ಮಂಡಿಸಿ ಎಂದು ಹೇಳಿಲ್ಲ. CAG ವರದಿಯ ಪ್ರಕಾರ ಯಾರು ತಪ್ಪು ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ವೆಂಕಟರಾವ್ ನಾಡಗೌಡ : ನೀರಾವರಿ ಬಗ್ಗೆ ಚರ್ಚಿಸಲು ನೀವು ಅವಕಾಶ ಕೊಡಿ, ನಾವು ಚರ್ಚೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : Wrong message ಹೋಗಬಾರದು. ನೀವು ತಪ್ಪು ಮಾಡಿರುವುದನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ. . . . ನಿನ್ನೆ CAG ವರದಿಯನ್ನು ಏಕೆ ಮಂಡಿಸಿದಿರಿ? ಇಷ್ಟೆಲ್ಲಾ ಆದರೂ ಸಭೆಯನ್ನು ಮುಂದೂಡುವುದು ಒಳ್ಳೆಯದು. ಇಲ್ಲವೆಂದರೆ ನಾವು ಸದನವನ್ನು boycott ಮಾಡಬೇಕಾಗುತ್ತದೆ. ಇದು ದುರುದ್ದೇಶಪೂರ್ವಕವಾಗಿ. . .

ಶ್ರೀ ಬಂಡೆಪ್ಪ ಖಾಶೆಂಪೂರ್ : ಅವರನ್ನು BAC ಗೆ ಕರೆಸಿ, ಸಭೆಯನ್ನು ಅರ್ಧ ಗಂಟೆ ಸಭೆಯನ್ನು ಮುಂದಕ್ಕೆ ಹಾಕಿ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನವನ್ನು boycott ಮಾಡಿದರು)

4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು :

ಕಾರ್ಯದರ್ಶಿ : ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ–1)